SRI M. MALLIKARJUNASWAMI (Minister for Public Works).—

(a) Yes.

(b) Yes.

(c) Not yet.

(d) Does not arise in view of reply to (Clause-c) above,

(e) Will be considered during 1977-78 subject to availability of funds.

ಶ್ರೀ ಟಿ. ತಾರೇಗೌಡ.—ಹೂಯಿಲು ದೊರೆ, ಹೊಸಕೆರೆ, ಶಿರಾ, ಮತ್ತು ಬಾಣಾವರ ರಸ್ತೆಗಳನ್ನು ಮಾಡುವುದಕ್ಕೆ ಹಿಂದಿನ ಸರ್ಕಾರವಿದ್ದ ಕಾಲದಲ್ಲೇ ಪ್ರೊಪೋಸರ್ ಆಗಿ ಮಾರ ಗೊಂಡನಹಳ್ಳಿ, ಹೊಸಕೆರೆ ಬಾರ್ಡರ್‌ರವರೆಗೆ ಎಲ್ಲ ರಸ್ತೆಗಳು ಪೂರ್ಣಗೊಂಡಿವೆ. ಈ ಮಧ್ಯೆ ಮಾರಗೊಂಡನಹಳ್ಳಿಯ ಹತ್ತಿರ 2—3 ಸೇತುವೆಗಳು ಆಗಬೇಕಾಗಿವೆ. ಇದರಿಂದಾಗಿ ತುಮ ಕೂರಿನಿಂದ ಬರತಕ್ಕ ಬಸ್ಸ್‌ಗಳು ಮುಂಚಲದೊರೆಯ ಹತ್ತಿರವೇ ನಿಂತುಕೊಳ್ಳುತ್ತವೆ. ಆದಕಾರಣ ಈ 2—3 ಸೇತುವೆಗಳನ್ನು ಸರ್ಕಾರದವರು ಮಾಡಿಸಿಕೊಟ್ಟರೆ ಜನತೆಗೆ ಅನುಕೂಲವಾಗುತ್ತದೆ ಇದನ್ನು ನಿಧಾನ ಮಾಡದೆ ಈ ವರ್ಷವೇ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ –ಈ ಬಗ್ಗೆ 1971ರಲ್ಲಿ ಒಂದು ಪ್ರೊಪೋಸಲ್ಲನ್ನು ಎಕ್ಸ್‌ಕ್ಯೂಟಿವ್ ಎಂಜಿನಿಯರ್‌ರವರು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಗೆ ಕಳುಹಿಸಿಕೊಟ್ಟರು. ಅದನ್ನು ಅವರು ಆಗ ಇಕಾನಮಿ ಮೆಷರ್ ಇದ್ದುದರಿಂದ ಕಳುಹಿಸದೆ ಈ ವರ್ಷ ಅದಕ್ಕೆ 2 ಲಕ್ಷ ರೂಪಾಯಿ ಅಂದಾಜು ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆದರ ನಕ್ಷೆ ಮತ್ತು ಅಂದಾಜನ್ನು ಸಾಧ್ಯವಾದಷ್ಟು ಬೇಗ ತರಿಸಿಕೊಳ್ಳುತ್ತೇವೆ, ಮತ್ತು 1977-78ರಲ್ಲಿ subject to the availavility of funds ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Shifting of Bangalore Race Course

153. SRI T.R. SHAMANNA(Fort).—Will the Minister for Finance be pleased to state.—

(a) whether there is any proposal to shift the Race Course from the present place;

(b) if so, when and where it will be shifted?

SRI M.Y. GHORPADE (Minister for Finance).—

(a) No.

(b) Does not arise.

ಶ್ರೀ ಟಿ. ಆರ್. ಶಾಮಣ್ಣ —ಈಗ ಕೆಲವು ತಿಂಗಳುಗಳ ಹಿಂದೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಛೇರ್ಮನ್ನರು ಮತ್ತಿತರರು ರೇಸ್‌ಕೋರ್ಸನ್ನು ಬೇರೆ ಕಡೆ ಹಾಕುವುದಕ್ಕೆ ಪ್ಲಾನ್ ಮಾಡುತ್ತಿದ್ದೇವೆಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದರು. ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದಿವೆ ?

† ಶ್ರೀ ಎಂ. ವೈ. ಘೋರ್ಪಡೆ.—ಅವರು ಆ ರೀತಿ ಆಲೋಚನೆ ಮಾಡಿರಬಹುದು. ಆದರೆ ಆ ಬಗ್ಗೆ ಏನು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಬಗ್ಗೆ ಏನಾದರೂ ಅವರು ಕಾರ್ಯಕ್ರಮವನ್ನು ಹಾಕಿ ಪ್ರೊಪೋಸಲ್ಲನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಪರಿಶೀಲನೆಮಾಡ್ತೇವೆಂದು ಈ ಬಗ್ಗೆ ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ —ಮೊದಲು ರೇಸ್‌ಕೋರ್ಸ್ ಪ್ರಾರಂಭವಾದಾಗ ಬೆಂಗಳೂರು ಪಟ್ಟಣಕ್ಕೆ ದೂರವಾಗಿತ್ತು ಮತ್ತು ಕೆಲವು ಸೀಸನ್‌ಗಳಲ್ಲಿ ಮಾತ್ರ ರೇಸುಗಳು ನಡೆಯುತ್ತಿದ್ದವು ಆದರೆ ಈಗ ವರ್ಷಂಪ್ರತಿ ರೇಸುಗಳು ನಡೆಯುತ್ತಿರುವುದರಿಂದ ಆ ರೇಸ್‌ಕೋರ್ಸ್ ಜನಗಳ ಮಧ್ಯೆ ಇರುವುದಕ್ಕೆ ಬದಲಾಗಿ ಊರ ಹೊರಗೆ ಹಾಕಿದರೆ ಒಳ್ಳೆಯದಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ.—ಆದೇ ವಿಚಾರ ಸರ್ಕಾರದಲ್ಲೂ ಇದೆ. ಅದು ಸ್ವಲ್ಪ ದೂರ ಇದ್ದರೆ ಒಳ್ಳೆಯದೆಂದು ಎಲ್ಲರ ಅಭಿಪ್ರಾಯವಾಗಿದೆ. ಅದನ್ನು ಯಾವ ರೀತಿ ಮಾಡಬೇಕು ಮತ್ತು ಅದಕ್ಕೆ ಎಷ್ಟು ಖರ್ಚಾಗುತ್ತದೆಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಅದನ್ನು ಷಿಫ್ಟ್ ಮಾಡಬೇಕಾದರೆ ಸುಮಾರು 4 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಅದನ್ನು ಯಾವ ಸ್ಥಳಕ್ಕೆ ಷಿಫ್ಟ್ ಮಾಡಬೇಕೆಂಬ ಬಗ್ಗೆ ಯಾವ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಇದುವರೆಗೂ ಸರ್ಕಾರ ಕೈಗೊಂಡಿಲ್ಲ. ಅದಕ್ಕೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇದೆ. ಅವರು ಆ ಬಗ್ಗೆ ಯೋಚನೆ ಮಾಡಿ ಪ್ರೊಪೋಸಲ್ ಕಳುಹಿಸಿದರೆ ಪರಿಶೀಲಿಸುತ್ತೇವೆ.

Subsidy for diesel pumpsets.

168. SRI B. BHYRAPPAJI (Turuvekere).—Will the Minister for Agriculture be pleased to state :—

(*a*) whether it is a fact that the Government has issued an order to grant 50% subsidy for providing diesel pumpsets to the ryots;

(*b*) if so, whether it has come to the notice of the Government that the subsidy has not been refused to many ryots;

(*c*) whether the Government would arrange to issue an order to the effect that the subsidy is made available to all ?

SRI N. CHIKKE GOWDA (Minister for Agriculturel).—(*a*) Yes. The Government had granted diesel pumpsets during 1965-66 and 1966-67 to the ryots *vide* G. O. No. A.F. 830-AML dated 19th May 1966. The order issued by Government provides for giving subsidy to the diesel pumpsets for the purpose of Agriculture and with the following horse power.

1.	Less than 5 H.P.	...	50%
2.	Between 5 & 10 H.P.	...	37½%
3.	More than 10 H.P.	...	25%

(*b*) The ryots who after availing the agricultural pumpsets loan during 1965-66 and 1966-67 with reference to Governments letter No. A. H.-53 A A. E. 71 and refunded their loan within 31st March 1976 will be eligible to subsidy. If not, they are not eligible to subsidy.

(*c*) The matters is under the consideration of Government.

ಶ್ರೀ ಬಿ. ಭೈರಪ್ಪಾಜಿ.—ತಮ್ಮ ಉತ್ತರದಲ್ಲಿ 1965-66ರಲ್ಲಿ ಮತ್ತು 1966-67ರಲ್ಲಿ ಮಂಜೂರಾಗಿದ್ದು ವ್ಯವಸಾಯಕ್ಕೆ ಉಪಯೋಗಿಸುವ ಪಂಪುಸೆಟ್‌ಗಳಿಗೆ ಶೇಕಡ 25ರಷ್ಟು, ಶೇಕಡ 50 ಮತ್ತು ಶೇಕಡ 37½ರಷ್ಟು ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದೀರಿ. ಆ ಬಗ್ಗೆ